ಮುತ್ತಿನಂಥ ಮಾತು

ಕೆಲಬಲಕೆ ಜೀಳದೆ ಮುನ್ನಡೆವ ಡೊಂಬನುಪಾಯ ಕಲೆಯೆ ಜೀವನ ಯೋಗ. -ಡಿ.ವಿ.ಜಿ.

ಓದುಗರ ಪತ್ರ

ದಲಿತ ಪರ ಕಾಳಜಿಗೆ ಅಭಿನಂದನೆ

ಮಾನ್ಯರೆ,

ಸರ್ಕಾರದ ಆದೇಶದಂತೆ ಸುಮಾರು ೪೦ ವರ್ಷಗಳ ಹಿಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯು ಮೈಸೂರು ನಗರ ವಿಸ್ತರಣೆಗಾಗಿ ಕೆ.ಜಿ.ಕೊಪ್ಪಲು, ವಿದ್ಯಾರಣ್ಯಪುರಂಗೆ ಹೊಂದಿಕೊಂಡಂತಿರುವ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವೀಳ್ಯದೆಲೆ, ಅಡಿಕೆ, ತೆಂಗಿನತೋಟ ಕೃಷಿ ಮಾಡಿ ಜೀವನ ಕಂಡುಕೊಂಡಿದ್ದ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತ್ತು.

ಆ ಕಾಲಘಟ್ಟದ ದಲಿತಪರ ಧ್ವನಿ ಹಾಗೂ ಪೌರಾಡಳಿತ ಸಚಿವರೂ ಆಗಿದ್ದ ಬಿ.ಬಸವಲಿಂಗಪ್ಪ ಅವರು ಭೂಮಿ ಕಳೆದುಕೊಂಡ ರೈತರಿಗೆ ಸೂಯೇಜ್ ಫಾರಂ ಬಳಿ ೧೦೦ ಎಕರೆ ಭೂಮಿಯನ್ನು ಮಂಜೂರು ಮಾಡಿದ್ದರು. ಅದರಲ್ಲಿ ೫೦ ಎಕರೆ ಭೂಮಿಯನ್ನು ಮಾತ್ರ ಹಂಚಿಕೆ ಮಾಡಿ ಉಳಿದ ೫೦ ಎಕರೆ ಭೂಮಿಯನ್ನು ನಗರಪಾಲಿಕೆಯು ಘನ ತ್ಯಾಜ್ಯ ನಿರ್ವಹಣೆಗಾಗಿ ಉಪಯೋಗಿಸಿಕೊಳ್ಳುವುದರ ಮೂಲಕ ರೈತರಿಗೆ ಅನ್ಯಾಯ ಮಾಡಿತ್ತು.

ವಿಪರ್ಯಾಸದ ಸಂಗತಿ ಎಂದರೆ ೪೦ ವರ್ಷಗಳಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಬಂದು ಹೋದವರು ಯಾರೂ ಮಾಡಲಾಗದಂತಹ ಕಾರ್ಯವನ್ನು ಇದೀಗ ಎಚ್.ಸಿ.ಮಹದೇವಪ್ಪರವರು ಮಾಡಿದ್ದಾರೆ. ದಲಿತರ ಸ್ಥಿತಿಯನ್ನು ಕಂಡು ಮರುಗಿ ಇದಕ್ಕೆ ತಾರ್ಕಿಕ ಅಂತ್ಯವನ್ನು ನೀಡಲೇಬೇಕೆಂದು ಅಧಿಕಾರಿಗಳೊಡನೆ ಸರಣಿ ಸಭೆಗಳನ್ನು ನಡೆಸಿರುವುದಲ್ಲದೆ, ಸಚಿವ ಸಂಪುಟಕ್ಕೆ ೨ ಬಾರಿ ಈ ವಿಷಯವನ್ನು ಚರ್ಚೆಗೆ ತಂದು ಮುಖ್ಯಮಂತ್ರಿಗಳ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಜೊತೆಗೆ ೩೦.೨೫ ಎಕರೆ ಜಮೀನನ್ನು ಅಶೋಕಪುರಂನ ೨೪೫ ವೀಳ್ಯದೆಲೆ ಬೆಳೆಗಾರರಿಗೆ ತಲಾ ೫ ಗುಂಟೆಯಂತೆ ನೀಡಿ ಅವರೆಲ್ಲರ ಆರ್ಥಿಕ ಸ್ವಾವಲಂಬನೆಯ ಬದುಕಿಗೆ ಕಾರಣೀಭೂತರಾಗುವ ಮೂಲಕ ನಿಜವಾದ ದಲಿತಪರ ಕಾಳಜಿಯನ್ನು ಬದ್ಧತೆಯಿಂದ ತೋರಿಸಿರುವ ಡಾ.ಎಚ್.ಸಿ.ಮಹದೇವಪ್ಪ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನೆಗಳು.

-ಮನು ಮಾವಿನಹಳ್ಳಿ,
ತಲಕಾಡು ಹೋಬಳಿ, ತಿ.ನರಸೀಪುರ ತಾ.

ಮೇಯರ್ ಕ್ಷೇತ್ರದ ಪಾದಚಾರಿ ಮಾರ್ಗ ಅವ್ಯವಸ್ಥೆ

ಮಾನ್ಯರೆ,

ನಮ್ಮ ಮೈಸೂರಿನ ಪ್ರಥಮ ಪ್ರಜೆ ಪ್ರತಿನಿಧಿಸುವ ನಗರದ ೩೫ನೇ ವಾರ್ಡಿನ ವ್ಯಾಪ್ತಿಗೆ ಬರುವ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಸಾರ್ವಜನಿಕರು ಸಂಚರಿಸಲು ಇರುವ ಪಾದಚಾರಿ ಮಾರ್ಗವು ಕುಸಿದು ಬಿದ್ದು ಎರಡು ತಿಂಗಳೇ ಕಳೆದರು ದುರಸ್ತಿ ಮಾತ್ರ ಕಾಣದೆ ಹಾಗೆಯೇ ಇದೆ.

ಈ ರಸ್ತೆಯಲ್ಲಿ ವಾಹನ ದಟ್ಟಣೆ ಅಧಿಕವಾಗಿದೆ. ಇನ್ನೊಂದೆಡೆ ಪಾದಚಾರಿಗಳು ರಸ್ತೆಯ ಮೇಲೆಯೆ ಓಡಾಡುತ್ತಾರೆ. ಈ ಸಂದರ್ಭದಲ್ಲಿ ಅಪಘಾತವಾಗುವ ಸಂಭವ ಕೂಡ ಇರುತ್ತದೆ.

ಶಾಲಾ ಕಾಲೇಜು ವಿದ್ಯಾರ್ಥಿಗಳೂ ಈ ಮಾರ್ಗದಲ್ಲಿ ಅಧಿಕ ಸಂಖ್ಯೆ ಯಲ್ಲಿ ಓಡಾಡುತ್ತಾರೆ. ಅಲ್ಲದೆ ಹಿರಿಯ ನಾಗರಿಕರು ಓಡಾಡುವಾಗ ಜಾರಿಬೀಳುವ ಸಂಭವ ಇರುತ್ತದೆ. ಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗದೇ ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕಿದೆ.

-ಪ್ರಮೋದ್ ಗೌಡ, ದೇವರಾಜ ಮೊಹಲ್ಲ.

'ನೋಟಾ'ಕ್ಕೆ ಚಿಹ್ನೆ ಬರಲಿ

ಮಾನ್ಯರೆ,

ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಚುನಾವಣೆ ಎಂಬುವದು ಪ್ರಜೆಗಳಿಗೆ ಯೋಗ್ಯ ವ್ಯಕ್ತಿಗಳನ್ನು ಆಯ್ಕೆ ಮಾಡಲು ಇರುವಂತಹ ಒಂದು ಪ್ರಮುಖ ಸಾಧನ. ೨೦೧೪ರ ಲೋಕಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ತಿರಸ್ಕರಿಸುವ ನೋಟಾಕ್ಕೆ ಮತ ಹಾಕುವ ಅವಕಾಶ ಕಲ್ಪಿಸಿಕೊಟ್ಟಿದ್ದು ಮಹತ್ತರ ವಿಚಾರ. ಆದರೆ ಅಕ್ಷರ ರೂಪದಲ್ಲಿರುವ ಈ ನೋಟಾಕ್ಕೆ ಮತ ನೀಡುವುದು ವಿದ್ಯಾವಂತರಿಗೆ ತಿಳಿದಿರುವ ವಿಚಾರವಾಗಿದೆ.

ರಾಷ್ಟ್ರೀಯ ಪಕ್ಷಗಳಿಗೆ ಚಿಹ್ನೆಯನ್ನು ಕೊಟ್ಟಂತೆಯೇ ನೋಟಾಕ್ಕೆ ಚಿಹ್ನೆ ಕೊಟ್ಟು ಅವಿದ್ಯಾವಂತರಲ್ಲೂ ಜಾಗೃತಿ ಮೂಡಿಸಿ ಮಾದರಿ ಪ್ರಜಾಪ್ರಭುತ್ವದ ಘನತೆಯನ್ನು ಎತ್ತಿಹಿಡಿಯಬೇಕು. ಕೇಂದ್ರ ಮತ್ತು ರಾಜ್ಯ ಚುನಾವಣೆ ಆಯುಕ್ತರು ಈ ಬಗ್ಗೆ ವಿಚಾರ ಮಾಡಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನೋಟಾಕ್ಕೂ ಚಿಹ್ನೆ ದೊರೆಯುವಂತೆ ಮಾಡಲಿ ಎನ್ನುವುದು ನಮ್ಮ ಮನವಿ.

-ಎಸ್.ಸುಂದರ್ ಕಲಿವೀರ್, ಮೈಸೂರು.

ಚುನಾವಣೆ ಅಭ್ಯರ್ಥಿ ಠೇವಣಿಯನ್ನೂ ಹೆಚ್ಚಿಸಿ

ಮಾನ್ಯರೆ,

ಮುಂಬರುವ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು, ಅಭ್ಯರ್ಥಿಯ ವೆಚ್ಚವನ್ನು ೨೮ ಲಕ್ಷ ರೂ. ಮತ್ತು ಲೋಕಸಭಾ ಸದಸ್ಯರ ವೆಚ್ಚವನ್ನು ೫೦ ಲಕ್ಷ ರೂ.. ಗಳಿಗೂ ಚುನಾವಣಾ ಆಯೋಗ ಏರಿಸಿದೆ. (ಆಂದೋಲನ, ೧೧)

ಗಮನಿಸಬೇಕಾದ ವಿಚಾರವೆಂದರೆ, ಅಭ್ಯರ್ಥಿಗಳಿಂದ ಸಂಗ್ರಹಿಸುವ ಠೇವಣಿ ಮೊತ್ತವನ್ನು ಈ ಮಟ್ಟದಲ್ಲೇ ಏರಿಸಿ ಹಾಗೆಯೆ, ಕನಿಷ್ಠ ಮತಗಳಿಕೆ ಪ್ರಮಾಣವನ್ನು ಆರನೇ ಒಂದಂಶದಿಂದ, ಎರಡನೆ ಒಂದಂಶಕ್ಕೇರಿಸಿ (ಗಳಿಸಿದ ಮತ) ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತಾಗಿದ್ದರೆ ಸರಿಯಾಗುತ್ತಿತ್ತೇನೋ!

(ನಿರುದ್ಯೋಗಿಗಳಿಂದ ಅರ್ಜಿ ಶುಲ್ಕ ಎಂದು ಸರ್ಕಾರ ಬೊಕ್ಕಸವನ್ನು ಭರ್ತಿ ಮಾಡಿಕೊಳ್ಳುತ್ತದೆ; ಹಾಗೆಯೇ ಹುರಿಯಾಳುಗಳಿಂದ ಹೆಚ್ಚಿನ ಮೊತ್ತದ ಠೇವಣಿಯನ್ನು ಪೀಕಿಸಬಹುದಿತ್ತು.) ಆದರೆ ಬೆಕ್ಕಿನ ಕೊರಳಿಗೆ ಗಂಟೆಯನ್ನು ಕಟ್ಟುವವರಾರು?!

-ಎಚ್.ಎಂ.ಅನಂತ ಪದ್ಮನಾಭ, ಕುವೆಂಪುನಗರ, ಮೈಸೂರು.

ಬರಿ ಕಾನೂನು ಮಾಡಿದರೆ ಸಾಕೆ?

ಮಾನ್ಯರೆ,

ವಾಹನ ಸವಾರರು ಮಾತ್ರ ನಿಯಮ ಉಲ್ಲಂಘಿಸುತ್ತಾರೆ. ಬೇರೆ ಎಲ್ಲರೂ ಕಾನೂನು ಪ್ರಕಾರವಾಗಿಯೇ ನಡೆದುಕೊಳ್ಳುತ್ತಾರೆ? ಹಿಂಬದಿ ಸವಾರರೂ ಐಎಸ್ಐ ಗುರುತಿನ ಹೆಲ್ಮೆಟ್ ಧರಿಸಬೇಕು ಎಂಬ ನಿಯಮದಿಂದ ಮಹಿಳೆಯರು ತೀವ್ರ ಸಂಕಷ್ಟ ಎದುರಿಸಬೇಕಾಗಿದೆ. ಸಭೆ ಸಮಾರಂಭಗಳಿಗೆ ಸರ್ವಾಲಂಕೃತರಾಗಿ ಹೊರಡುವ ಮಹಿಳೆಯರು ಮೇಕಪ್ ಮತ್ತು ತಲೆ ಬಾಚಿರುವುದು ಹಾಳಾಗುತ್ತದೆ ಎಂಬ ಕಾರಣದಿಂದ ಹೆಲ್ಮೆಟ್ ಧರಿಸಲು ಹಿಂದೇಟು ಹಾಕುತ್ತಾರೆ. ಮಹಿಳೆಯರು ರೊಚ್ಚಿಗೇಳುವ ಮೊದಲು ಈ ಕಡ್ಡಾಯ ನಿಯಮಗಳನ್ನು ತೆಗೆಯಲಿ.

-ಮುಳ್ಳೂರು ಪ್ರಕಾಶ್, ಮೈಸೂರು

ಚುನಾವಣೆಗಳು, ಕೋಶೀಯ ಶಿಸ್ತು ಮತ್ತು ಬಜೆಟ್

ಪ್ರೊ. ಆರ್.ಎಂ. ಚಿಂತಾಮಣಿ
ಆರ್ಥಿಕ ತಜ್ಞರು

ಲೋಕಸಭಾ ಚುನಾವಣಾ ಪೂರ್ವ ೨೦೧೮-೧೯ರ ಬಜೆಟ್ ತಯಾರಿಕೆಯಲ್ಲಿ ಜೇಟ್ಲಿಯವರಿಗೆ ಹಿಂದಿನ ಎನ್.ಡಿ.ಎ ಸರ್ಕಾರದ ಅರ್ಥಮಂತ್ರಿ ಜಸ್ವಂತ್ ಸಿಂಗ್ ಅವರಷ್ಟು ಮುಕ್ತ ವಾತಾವರಣವಿಲ್ಲ. ಆಗ ಭಾರತ ಪ್ರಕಾಶಿಸುತ್ತಿತ್ತು. ಈಗ ಜೇಟ್ಲಿಯವರು ಆರ್ಥಿಕ ಸವಾಲುಗಳು ಮತ್ತು ರಾಜಕೀಯ ಆಶಯಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆ ಇದೆ.

ಅರುಣ್ ಜೇಟ್ಲಿಯವರು ಸತತ ಐದನೇ ಬಾರಿಗೆ ಫೆಬ್ರವರಿ ೧ರಂದು ಲೋಕಸಭೆಯಲ್ಲಿ ಕೇಂದ್ರ ಸರ್ಕಾರದ ಪೂರ್ಣಾವಧಿ ಮುಂಗಡ ಪತ್ರವನ್ನು ಮಂಡಿಸಲಿದ್ದಾರೆ. ಇದೊಂದು ಅಪರೂಪದ ಗೌರವವೆಂದೇ ಹೇಳಬೇಕು. ಏಕೆಂದರೆ ನಮ್ಮ ದೇಶದಲ್ಲಿ ಇಂಥ ಉದಾಹರಣೆಗಳೇ ವಿರಳ. ಮೊರಾರ್ಜಿ ದೇಸಾಯಿ ಅತಿ ಹೆಚ್ಚು (ಹತ್ತು) ಕೇಂದ್ರ ಬಜೆಟ್ ಮಂಡಿಸಿದ ದಾಖಲೆ ಹೊಂದಿದ್ದರೂ ಸತತ ಐದು ಬಾರಿ ಆ ಅವಕಾಶ ಸಿಕ್ಕಿರಲಿಲ್ಲ. ಹಿಂದಿನ ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರದಲ್ಲಿಯೂ ಮೊದಲ ಮೂರು ವರ್ಷ ಯಶವಂತ ಸಿನ್ಹಾ ವಿತ್ತ ಮಂತ್ರಿಯಾಗಿದ್ದರೆ ಕೊನೆಯ ಎರಡು ವರ್ಷ ಜಸ್ವಂತ್ ಸಿಂಗ್ ಇದ್ದರು. ಇಷ್ಟೇ ಅಲ್ಲ ೧೯೭೧ರ ವರೆಗೆ ಯಾವ ಅರ್ಥ ಮಂತ್ರಿಯೂ ಮೂರನೇ ಕೇಂದ್ರ ಮುಂಗಡ ಪತ್ರ ಮಂಡಿಸಲಿಕ್ಕಾಗುವುದಿಲ್ಲ ಎಂಬ ಮಾತು ಜನಜನಿತವಾಗಿತ್ತು. ಯಾವುದೋ ಕಾರಣಕ್ಕಾಗಿ ರಾಜೀನಾಮೆ ಕೊಡುತ್ತಿದ್ದರು. ಆ ವರ್ಷ ವೈ.ಬಿ.ಚವ್ಹಾಣರವರು ಒಂದೇ ವರ್ಷ ಒಂದು ಪೂರ್ಣ ಬಜೆಟ್‌ನೊಂದಿಗೆ ಮೂರು ಪೂರಕ ಬಜೆಟ್ ಬೇಡಿಕೆಗಳನ್ನು ಮಂಡಿಸಿ ಕಳಂಕ ಕಳೆದುಕೊಂಡು ಮುಕ್ತರಾದರು ಎಂದು ಮಾಧ್ಯಮಗಳಲ್ಲಿ ಟಿಪ್ಪಣಿ ಬರೆಯಲಾಗಿತ್ತು. ಜೇಟ್ಲಿಯವರಿಗೆ ಅಭಿನಂದನೆಗಳು.

ಆದರೆ ಈ ವರ್ಷದ ಬಜೆಟ್ ತಯಾರಿಕೆ ಅಂದುಕೊಂಡಷ್ಟು ಸರಳವಾಗಿಲ್ಲ. ಅದು ತಂತಿಯ ಮೇಲೆ ನಡೆದಂತೆ. ಅದಕ್ಕೆ ೨ ಪ್ರಮುಖ ಕಾರಣಗಳು. ಒಂದು: ಮುಂದಿನ ದಿನಗಳಲ್ಲಿ ಏಳೆಂಟು ರಾಜ್ಯಗಳ (ಅದರಲ್ಲೂ ಕರ್ನಾಟಕ ಸೇರಿದಂತೆ ನಾಲ್ಕು ದೊಡ್ಡ ರಾಜ್ಯಗಳ) ವಿಧಾನ ಸಭಾ ಚುನಾವಣೆಗಳು ನಡೆಯಲಿವೆ. ಅಲ್ಲದೇ ೨೦೧೯ರ ಏಪ್ರಿಲ್-ಮೇ ತಿಂಗಳಲ್ಲಿ ಲೋಕಸಭಾ ಚುನಾವಣೆಯೂ ಬರುತ್ತಿದೆ. ಅದಕ್ಕಾಗಿ ಮತದಾರರ ಓಲೈಕೆಗಾಗಿ ಜನಪ್ರಿಯ ಎನ್ನಬಹುದಾದ ಯೋಜನೆಗಳನ್ನು ಪ್ರಕಟಿಸಲೇಬೇಕಾದ ಅನಿವಾರ್ಯತೆ ಇದೆ. ಆಗ ಸರ್ಕಾರದ ವೆಚ್ಚಗಳು ಹೆಚ್ಚಲೇಬೇಕಾಗುತ್ತದೆ. ಇದಕ್ಕೆ ಸಂಪನ್ಮೂಲ ಹೊಂದಿಸಲು ಸಾಲ ಎತ್ತಬೇಕು. ಎರಡನೇ ಕಾರಣವೆಂದರೆ ತಾವೇ ಹಾಕಿಕೊಂಡಿರುವ ಕೋಶೀಯ ಶಿಸ್ತು ಬದ್ಧತೆಯು ಹೀಗೆ ಸಾಲ ಹೆಚ್ಚಿಸಲು ಅವಕಾಶ ಕೊಡುವುದಿಲ್ಲ. ೨೦೧೮-೧೯ರಲ್ಲಿ ಕೋಶೀಯ ಕೊರತೆ ರಾಷ್ಟ್ರೀಯ ಒಟ್ಟಾದಾಯದ ಶೇ.೩ಕ್ಕೆ ಮೀರದಂತಿರಬೇಕೆಂಬ ಮಾರ್ಗಸೂಚಿ ಇದೆ. ಇತ್ತೀಚಿನ ಎನ್.ಕೆ.ಸಿಂಗ್ ಸಮಿತಿಯಂತೂ ಬೆಳವಣಿಗೆಯ ನೆಪದಿಂದ ಸರ್ಕಾರ ಅತಿಯಾಗಿ ಖರ್ಚು ಮಾಡಿ ಸಾಲದ ಹೊರೆಯನ್ನು ಹೆಚ್ಚಿಸಿಕೊಂಡರೆ ಅದು ಅರ್ಥವ್ಯವಸ್ಥೆಯನ್ನೇ ಹಾಳು ಮಾಡಿದಂತೆ ಆಗುತ್ತದೆ ಎಂದು ಅಭಿಪ್ರಾಯಪಟ್ಟಿದೆ.

೨೦೧೭-೧೮ರ ನಿರಾಶಾದಾಯಕ ಪ್ರಗತಿ

ಇದಿಷ್ಟು ಸಾಲದೆಂಬಂತೆ ಕಳೆದ ವಾರಾಂತ್ಯದಲ್ಲಿ ಕೇಂದ್ರ ಅಂಕಿಸಂಖ್ಯಾ ಸಂಸ್ಥೆ ಪ್ರಕಟಿಸಿರುವ ೨೦೧೭-೧೮ರ ಅಂದಾಜು ಅಂಕಿ ಸಂಖ್ಯೆಗಳು ಆಶಾದಾಯಕವಾಗಿಲ್ಲ. ಅದರಂತೆ ರಾಷ್ಟ್ರೀಯ ಒಟ್ಟಾದಾಯವು ಶೇ. ೬.೫ರಷ್ಟು ಮಾತ್ರ ಬೆಳವಣಿಗೆ ಕಾಣುವ ಅಂದಾಜಿದೆ. ಇದು ಕಳೆದ ನಾಲ್ಕು ವರ್ಷಗಳಲ್ಲೇ ಅತಿ ಕಡಿಮೆ. ಕೃಷಿ ವಲಯ ಶೇ.೨.೧ ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಗತಿ ಕಾಣಲಾರದೆಂದು ಅದರಲ್ಲಿ ಹೇಳಲಾಗಿದೆ. ಇವೆರಡೂ ವರ್ಷದ ಆರಂಭದಲ್ಲಿ ಅಂದಾಜಿಸಿದ್ದಕ್ಕಿಂತ ತೀರ ಕೆಳಮಟ್ಟದಲ್ಲಿವೆ. ಈ ವರ್ಷದ ಮಳೆಗಾಲ ಉತ್ತಮವಾಗಿ ಆರಂಭವಾಗಿದ್ದರಿಂದ ಕೃಷಿ ಬೆಳವಣಿಗೆ ಶೇ.೪.೫ಕ್ಕಿಂತ ಹೆಚ್ಚಿಗೆ ಇರಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಈಗ ಅದರ ಅರ್ಧದಷ್ಟನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ ಎನ್ನುವಂತಾಗಿದೆ. ಇತರ ವಲಯಗಳಲ್ಲಿ ಅಸಂಘಟಿತ ವಿಭಾಗವು (Unorganised sector) ನಕಾರಾತ್ಮಕ ಬೆಳವಣಿಗೆ ಕಂಡಿರುವುದು ಅಪಾಯಕಾರಿ.

ಕಳೆದ ನವೆಂಬರ್ ಕೊನೆಯವರೆಗೆ ವರ್ಷದ ಎಂಟು ತಿಂಗಳಲ್ಲಿಯೇ ಕೋಶೀಯ ಕೊರತೆಯು ಇಡೀ ವರ್ಷಕ್ಕಾಗಿ ಬಜೆಟ್‌ನಲ್ಲಿ ಅಂದಾಜಿಸಿದ ೫.೪೬ ಲಕ್ಷ ಕೋಟಿ ರೂ.ಗಳಿಗಿಂತ ಶೇ. ೧೧೨ರಷ್ಟು ಹೆಚ್ಚಾಗಿತ್ತು. ಹಿಂದಿನ ಹತ್ತು ವರ್ಷಗಳಲ್ಲೇ ಇದು ಅತಿ ಹೆಚ್ಚೆಂದು ಸಂಶೋಧಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣವೂ ಇದೆ. ೨೦೧೭-೧೮ರ ಮೊದಲ ತ್ರೈಮಾಸಿಕ ಜಿ.ಡಿ.ಪಿ. ಕೇವಲ ಶೇ. ೫.೭ರಷ್ಟು ಮಾತ್ರ ಬೆಳವಣಿಗೆಯಾದದ್ದನ್ನು ಮತ್ತು ಉದ್ಯೋಗ ಸೃಷ್ಟಿ ಕುಂಠಿತಗೊಂಡದ್ದನ್ನು ಹಿಂದಿನ ಅರ್ಥಮಂತ್ರಿ ಆಡಳಿತ ಪಕ್ಷದ ಯಶವಂತ ಸಿನ್ಹಾ ಸೇರಿದಂತೆ ಹಲವು ಜನ ಅರ್ಥಶಾಸ್ತ್ರಜ್ಞರು ಗಂಭೀರವಾಗಿ ಪರಿಗಣಿಸಿ ಆತಂಕ ವ್ಯಕ್ತಪಡಿಸಿದ್ದರು. ಆಗ ಸ್ಥಳೀಯ ಖಾಸಗಿ ಹೂಡಿಕೆಗಳು ಹೆಚ್ಚಾಗಲು ಮತ್ತು ಸ್ಥಾಪಿತ ಸಾಮರ್ಥ್ಯಗಳನ್ನು ವಿಸ್ತರಿಸಲು ಸರ್ಕಾರವೇ ಮೊದಲು ಆರೇಳು ತಿಂಗಳಲ್ಲಿ ಬಜೆಟ್ ಅಂದಾಜಿನ ಶೇ.೯೨ರಷ್ಟಿದ್ದ ಕೋಶೀಯ ಕೊರತೆ (ಸಾಲ ಎತ್ತುವಿಕೆ) ಅದರ ಶೇ. ೧೧೨ಕ್ಕೆ ಏರಿದ್ದು ಸಹಜ. ನಂತರದ ನಾಲ್ಕು ತಿಂಗಳ ವೆಚ್ಚಗಳನ್ನು ಗಮನಿಸಿದರೆ ಬಜೆಟ್ ಅಂದಾಜಿನ ಶೇ.೪೦ರಷ್ಟಾದರೂ ಕೋಶೀಯ ಕೊರತೆ ಹೆಚ್ಚಾಗುವ ಸಾಧ್ಯತೆ ಇದೆ. ಇದೇ ಸಮಯದಲ್ಲಿ ಜಿ.ಡಿ.ಪಿ. ಬೆಳವಣಿಗೆ ಶೇ. ೬.೫ಕ್ಕೆ ಇಳಿದರೆ ಖಂಡಿತವಾಗಿಯೂ ೨೦೧೭-೧೮ ನೇ ಸಾಲಿಗಾಗಿ ನಿಗದಿಪಡಿಸಿಕೊಂಡಿದ್ದ ಶೇ.೩.೨ರ ಕೋಶೀಯ ಕೊರತೆಯ ಮಿತಿಯನ್ನು ಮೀರಲೇಬೇಕಾಗುತ್ತದೆ. ಈ ಕಂದಕ ದೊಡ್ಡದಾದಷ್ಟು ಸಮಸ್ಯೆ ಉಲ್ಬಣಗೊಳ್ಳುತ್ತದೆ. ಇದರ ಕೆಟ್ಟ ಪರಿಣಾಮ ೨೦೧೮-೧೯ರ ಮುಂಗಡ ಪತ್ರ ತಯಾರಿಕೆಯಲ್ಲಿ ಕಾಣಿಸಿಕೊಳ್ಳುತ್ತದೆ. ಆಗ ಬೆಳವಣಿಗೆಗಾಗಿ ಸ್ವಲ್ಪ ಕೈ ಸಡಿಲಗೊಳಿಸಿ ಹೆಚ್ಚು ಖರ್ಚು ಮಾಡಬೇಕೆ ಅಥವಾ ಕೋಶೀಯ ಶಿಸ್ತಿಗೆ ಬದ್ಧರಾಗಿ ಬೆಳವಣಿಗೆ ಕುಂಠಿತವಾಗುವುದನ್ನು ಸಹಿಸಿಕೊಳ್ಳಬೇಕೆ ಎಂಬ ಪ್ರಶ್ನೆ ಅರ್ಥ ಸಚಿವರನ್ನು ಗಾಢವಾಗಿ ಕಾಡುತ್ತಿದೆ.

ಇದೇ ಕಾರಣದಿಂದ ಪ್ರಧಾನಿಗಳು ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಮ್ಮೇಳನಕ್ಕೆ ಸ್ವಿಟ್ಜರ್ಲೆಂಡಿನ ದಾವೋಸಿಗೆ ಹೋಗುವ ಮೊದಲು ಅರ್ಥ ಸಚಿವರೊಡಗೂಡಿ ಆರ್ಥಿಕ ತಜ್ಞರೊಡನೆ ಸುದೀರ್ಘ ಚರ್ಚೆ ಮಾಡಿದ್ದಾರೆ. ಮೊದಲಿನಂತೆ ಸ್ಥೂಲವಾಗಿ (Macro Level) ಸಲಹೆಗಳನ್ನು ಕೊಡುವುದಕ್ಕಷ್ಟೇ ಸೀಮಿತಗೊಳ್ಳದೆ ಪ್ರಧಾನಮಂತ್ರಿಗಳು ಬಜೆಟ್ ತಯಾರಿಕೆಯಲ್ಲಿ ಹೆಚ್ಚು ಸಕ್ರಿಯವಾಗಿ ತೊಡಗಿಸಿಕೊಂಡಂತೆ ಭಾಸವಾಗುತ್ತದೆ.

ಜಾಗತಿಕ ಮಟ್ಟದಲ್ಲಿ ಬಡ್ಡಿ ದರಗಳು ಏರುಮುಖವಾಗಿ ಚಲಿಸುವ ಎಲ್ಲ ಲಕ್ಷಣಗಳೂ ಕಂಡುಬರುತ್ತಿರುವುದರಿಂದ ವಿದೇಶಿ ನೇರ ಹೂಡಿಕೆಗಳಾಗಲಿ ಬಂಡವಾಳ ಪೇಟೆಯ ಸಾಂಸ್ಥಿಕ ಹೂಡಿಕೆದಾರರಿಂದಾಗಲಿ ಹೆಚ್ಚಿನ ನಿರೀಕ್ಷೆಯನ್ನು ಇಟ್ಟುಕೊಳ್ಳುವಂತಿಲ್ಲ. ನಮ್ಮ ಪೇಟೆಗಳಿಗಿಂತ ಯುರೋಪ್ ಮತ್ತು ಅಮೆರಿಕಾ ಪೇಟೆಗಳಲ್ಲಿ ಹೆಚ್ಚು ಲಾಭ ಬರುವಂತಹ ಸ್ಥಿತಿ ನಿರ್ಮಾಣವಾದರೆ ಈಗ ಇರುವ ಹೂಡಿಕೆಗಳನ್ನು ಅವರು ಬೇರೆಡೆಗೆ ವರ್ಗಾಯಿಸಿಕೊಂಡಾರು. ಜಾಗತಿಕ ಪೇಟೆಯಲ್ಲಿ ಕಚ್ಚಾತೈಲದ ಬೆಲೆಗಳು ಅಪಾಯದ ಮಟ್ಟಕ್ಕೆ ಮೇಲೆ ಹೋದರೆ ನಮ್ಮ ವಿದೇಶಿ ವ್ಯಾಪಾರ ಶೇಷ ಇನ್ನೂ ಆತಂಕಕಾರಿ ಆಗಬಹುದು. ಹೀಗಾಗಿ ರಿಜರ್ವ್ ಬ್ಯಾಂಕಿನ ಹಣಕಾಸು ನೀತಿಯಲ್ಲೂ ಸಡಿಲಿಕೆ ಮತ್ತು ಬಡ್ಡಿದರ ಇಳಿತ ನಿರೀಕ್ಷಿಸುವಂತಿಲ್ಲ.

ತೆರಿಗೆ ಸಂಗ್ರಹದಲ್ಲಿ ಏರಿಳಿತ

ಒಂದು ಆಶಾದಾಯಕ ಬೆಳವಣಿಗೆ ಎಂದರೆ ೨೦೧೭ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ೯ ತಿಂಗಳಲ್ಲಿ ಕೇಂದ್ರದ ನೇರ ತೆರಿಗೆ ಸಂಗ್ರಹದಲ್ಲಿ ಹೆಚ್ಚು ಪ್ರಗತಿ ಕಂಡುಬಂದಿದೆ. ಆದಾಯ ತೆರಿಗೆ, ಕಾರ್ಪೋರೇಟ್ ಆದಾಯ ತೆರಿಗೆ ಮತ್ತು ಇತರ ನೇರ ತೆರಿಗೆಗಳೂ ಸೇರಿದಂತೆ ಈ ಮೂಲದಿಂದ ಈವರೆಗೆ ನಿವ್ವಳ ೬.೫೬ ಲಕ್ಷ ಕೋಟಿ ರೂ. (ಒಟ್ಟು ಸಂಗ್ರಹದಲ್ಲಿ ಕಳೆದ ವರ್ಷದ ಹೆಚ್ಚುವರಿ ಸಂಗ್ರಹಿಸಿದ್ದನ್ನು ಮರುಪಾವತಿ ನಂತರ) ಸಂಗ್ರಹವಾಗಿದೆ. ಇದು ಕಳೆದ ವರ್ಷ ಇದೇ ಅವಧಿಯ ಸಂಗ್ರಹ ೫.೫೪ ಲಕ್ಷ ಕೋಟಿ ರೂ.ಗಿಂತ ಶೇ ೧೮.೨ರಷ್ಟು ಹೆಚ್ಚಾಗಿದೆ. ಬಜೆಟ್‌ನಲ್ಲಿ ಶೇ. ೧೫ರಷ್ಟು ಹೆಚ್ಚಾಗಬಹುದೆಂದು ಅಂದಾಜಿಸಲಾಗಿತ್ತು. ಇದರಲ್ಲಿ ಕಂಪನಿಗಳು ಕಟ್ಟಿದ ಮುಂಗಡ ತೆರಿಗೆಯೂ ಸೇರಿಕೊಂಡಿದೆ. ಮುಂದಿನ ೩ ತಿಂಗಳಲ್ಲಿ ಇದೇ ಪ್ರಮಾಣದಲ್ಲಿ ಹೆಚ್ಚಾಗುವುದೆಂದು ನಿರೀಕ್ಷಿಸಿದರೆ ಹಣಕಾಸು ಮಂತ್ರಿಗಳ ಬಜೆಟ್ ತಯಾರಿಕೆಯ ಸಮಸ್ಯೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ಆದರೆ ಪರೋಕ್ಷ ತೆರಿಗೆ ಸಂಗ್ರಹದಲ್ಲಿ ಅನಿಶ್ಚಿತತೆ ಮುಂದುವರಿದಿದೆ. ಜಿ.ಎಸ್.ಟಿ ಜಾರಿಗೊಳಿಸಿದ ಆರಂಭದಲ್ಲಿ ಒಂದು ತಿಂಗಳು ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಸಂಗ್ರಹವಾದಂತೆ ಕಂಡಿತಾದರೂ ನಂತರ ದಿನಗಳಲ್ಲಿ ಕಡಿಮೆಯಾದದ್ದನ್ನು ಗಮನಿಸಬೇಕಾಗುತ್ತದೆ. ತಾಂತ್ರಿಕ ತೊಂದರೆಗಳಲ್ಲದೆ ತೆರಿಗೆ ದರಗಳನ್ನು ಇತ್ತೀಚೆಗೆ ಹೆಚ್ಚು ವಸ್ತು ಮತ್ತು ಸೇವೆಗಳ ಮೇಲೆ ಇಳಿಸಿರುವುದರಿಂದಾಗಿ ಅಂತಿಮ ಸಂಗ್ರಹ ಗಣನೀಯವಾಗಿ ಕುಸಿಯುವ ಸಾಧ್ಯತೆ ಇದೆ. ಸರ್ಕಾರದ ಅಂದಾಜಿನಂತೆಯೇ ಜಿ.ಎಸ್.ಟಿ ಸಂಗ್ರಹ, ರಿಜರ್ವ್ ಬ್ಯಾಂಕಿನ ಲಾಭ ವರ್ಗಾವಣೆ ಮತ್ತು ಅಂತರ್ಜಾಲ ತರಂಗಾಂತರಗಳ ಗುತ್ತಿಗೆಯಿಂದ ಬರುವ ಆದಾಯ ಇವುಗಳ ಕೊರತೆಯೇ ೫೦,೦೦೦ ಕೋಟಿ ರೂ. ಗಳಾಗಬಹುದು. ಅರ್ಥ ಮಂತ್ರಿಗಳು ಇದಕ್ಕೂ ದಾರಿ ಹುಡುಕಬೇಕಾಗುತ್ತದೆ. ಇಲ್ಲದಿದ್ದರೆ ಕೋಶೀಯ ಕೊರತೆಯ ಮೇಲೆ ಒತ್ತಡ ಖಚಿತ.

ಸರ್ಕಾರಿ ಬ್ಯಾಂಕುಗಳ ಪುನಶ್ಚೇತನಕ್ಕಾಗಿ ಹೆಚ್ಚುವರಿ ಬಂಡವಾಳವನ್ನು ಒದಗಿಸುವ ಹೊಸ ಯೋಜನೆಯ ಎಲ್ಲ ೨.೧೧ ಲಕ್ಷ ಕೋಟಿ ರೂ.ಗಳ ಭಾರವೂ ಬಜೆಟ್ ಮೇಲೆ ಬೀಳುವುದಿಲ್ಲ. ಆದರೂ ಪರೋಕ್ಷವಾಗಿ ಬಜೆಟ್ ಗಣಿತದ ಮೇಲೆ ಪರಿಣಾಮವಾಗುವುದಂತೂ ನಿಜ. ವಿದ್ಯುತ್ ವಿತರಣೆಯಲ್ಲಿ ತೊಡಗಿರುವ ರಾಜ್ಯ ಸರ್ಕಾರಗಳ ನಿಗಮಗಳ ಆರ್ಥಿಕ ಸ್ಥಿತಿ ಸುಧಾರಿಸಲು ಒಂದಿಲ್ಲೊಂದು ಹೊಸ ಸಮಸ್ಯೆ ಉದ್ಭವಿಸುತ್ತದೆ. ದೇಶದಾದ್ಯಂತ ಕೃಷಿಕರ ಬೇಡಿಕೆಗಳ ಈಡೇರಿಕೆಗಾಗಿ ಲಾಭದಾಯಕ ಬೆಲೆಯನ್ನು ಕೃಷಿ ಉತ್ಪನ್ನಗಳಿಗೆ ಒದಗಿಸುವಾಗಲೂ ಬೆಂಬಲ ಬೆಲೆಯ ಏರಿಕೆಯಿಂದಲೂ ಮುಂಗಡ ಪತ್ರದ ಲೆಕ್ಕಾಚಾರ ಏರುಪೇರಾಗುವ ಸಾಧ್ಯತೆಯೂ ಇದೆ. ಸ್ವಚ್ಛ ಭಾರತ ಅಭಿಯಾನ, ನಮಾಮಿ ಗಂಗಾ ಯೋಜನೆ ಸೇರಿದಂತೆ ಮುಂದುವರಿಯುತ್ತಿರುವ ವಿಶೇಷ ಯೋಜನೆಗಳಿಗೂ ಹೆಚ್ಚಿನ ಅನುದಾನ ಬೇಕಾಗುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಯೋಜನೆಗಳೂ ಇವೆ

ಸುತ್ತೂರು ಜಾತ್ರೆ ಧಾರ್ಮಿಕ ಸಾಂಸ್ಕೃತಿಕ ಯಾತ್ರೆ

ಎಸ್.ಎಂ. ಜಂಬುಕೇಶ್ವರ

ಪ್ರತಿವರ್ಷ ಸುತ್ತೂರು ಶ್ರೀ ಶಿವರಾತ್ರೀಶ್ವರರ ಜಾತ್ರೆಯು ಪುಷ್ಯ ಬಹುಳ ದ್ವಾದಶಿಯಂದು ಆರಂಭಗೊಂಡು ೬ ದಿನ ನಡೆಯುತ್ತದೆ. ಜಾತ್ರೆಯಲ್ಲಿ ವೈವಿಧ್ಯಪೂರ್ಣ ಕಾರ್ಯಕ್ರಮಗಳಿರುತ್ತವೆ. ಈ ವರ್ಷ ಜ.೧೩ ರಿಂದ ೧೮ರವರೆಗೆ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳು ಜರುಗಲಿವೆ.

ಜಾತ್ರೆಗಳೆಂದರೆ ಸಮಾಜದ ಎಲ್ಲಾ ಜಾತಿ ಜನಾಂಗಗಳ ಜನರನ್ನು ಒಂದುಗೂಡಿಸುವ, ತನ್ಮೂಲಕ ತಾವೆಲ್ಲ ಒಂದೇ ಎಂಬ ಭಾವ ಮೂಡಿಸುವ ಮಹತ್ವಪೂರ್ಣ ಆಚರಣೆಗಳಾಗಿವೆ. ಜನವರಿ ಬಂತೆಂದರೆ ಜಾತ್ರೆಗಳ ಪರ್ವಕಾಲ ಪ್ರಾರಂಭವಾಗುವುದು. ನಮ್ಮ ರಾಜ್ಯದಲ್ಲಿ ಜಾತ್ರೆಗಳಿಗೆ ಮಹತ್ತರವಾದ ಸ್ಥಾನವುಂಟು. ಜಾತ್ರೆಗಳು ಪ್ರಸಿದ್ಧವಾದ ಪುಣ್ಯಕ್ಷೇತ್ರಗಳ, ದೇವರುಗಳ ಅಥವಾ ಪವಾಡ ಪುರುಷರ ಹೆಸರಿನಲ್ಲಿ ನಡೆಯುತ್ತವೆ.

ಸಾಮಾನ್ಯವಾಗಿ ಜಾತ್ರೆಗಳು ಹಳ್ಳಿಗಳ ರೈತಾಪಿ ಜನರು ಬೆಳೆದ ಬೆಳೆಯನ್ನು ಒಕ್ಕಣೆ ಮಾಡಿ, ದವಸ ಧಾನ್ಯಗಳನ್ನು ಮನೆಗೆ ತುಂಬಿಕೊಂಡು ಬಂದ ಮೇಲೆ ಜನ-ಜಾನುವಾರಗಳಿಗೆ ವಿರಾಮ ದೊರೆತಾಗ ಭೂಮಿಗೂ ಬಿಡುವು ಕೊಟ್ಟಾಗ ಆಚರಿಸಲ್ಪಡುತ್ತವೆ. ಕೆಲವು ಜಾತ್ರೆಗಳು ಬೇಸಿಗೆ ಕಾಲದಲ್ಲಿ ನಡೆದರೆ ಇನ್ನು ಕೆಲವು ಚಳಿಗಾಲದಲ್ಲಿಯೂ ನಡೆಯುತ್ತವೆ. ಒಂದು ದಿನದಿಂದ ಒಂದು ತಿಂಗಳವರೆಗೂ ನಡೆಯುವ ಜಾತ್ರೆಗಳೂ ಇವೆ. ಹತ್ತಾರು ವರ್ಷಗಳ ಹಿಂದೆ ಜಾತ್ರೆಗಳು ಕೇವಲ ಧಾರ್ಮಿಕ ಆಚರಣೆಗಳಿಗಷ್ಟೇ ಸೀಮಿತಗೊಂಡಿದ್ದವು. ಆದರೆ ಇತ್ತೀಚೆಗೆ ನಡೆಯುವ ಜಾತ್ರೆಗಳು ಧಾರ್ಮಿಕ ಆಚರಣೆಯ ಜೊತೆಗೆ ಸಾಂಸ್ಕೃತಿಕ ವ್ಯಾವಹಾರಿಕ ಚಟುವಟಿಕೆಗಳಿಂದಲೂ ಕೂಡಿರುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಜಾತ್ರೆಯಲ್ಲಿ ದನಗಳ ಪ್ರದರ್ಶನ-ಮಾರಾಟ; ಜನರ ಮನರಂಜನೆಗಾಗಿ ನೃತ್ಯ, ಸಂಗೀತ, ನಾಟಕಗಳ ಪ್ರದರ್ಶನ; ರೈತರಿಗೆ ಕೃಷಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವ ಸಲುವಾಗಿ ವಿಚಾರಸಂಕಿರಣಗಳು, ವಸ್ತು ಪ್ರದರ್ಶನಗಳು; ಆರೋಗ್ಯ, ಕೈಗಾರಿಕೆ, ವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವಾರು ಮಾಹಿತಿಗಳು ದೊರೆಯುವಂತೆ ಮಾಡಲಾಗುತ್ತಿದೆ.

ಕರ್ನಾಟಕದಲ್ಲಿ ನಡೆಯುವ ಬಹಳಷ್ಟು ಜಾತ್ರೆಗಳು ಹೆಚ್ಚಿನದಾಗಿ ಧಾರ್ಮಿಕ ನಂಬಿಕೆಗೆ ಸೀಮಿತವಾಗಿವೆ. ಆದರೆ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಸುತ್ತೂರಿನಲ್ಲಿ ನಡೆಯುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಜಾತ್ರೆಯು ಧಾರ್ಮಿಕ ಆಚರಣೆಗಳ ಜೊತೆಗೆ ಸಾಂಸ್ಕೃತಿಕ ಯಾತ್ರೆಯಾಗಿಯೂ ನಡೆಯುತ್ತದೆ. ೬ ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಧಾರ್ಮಿಕವಾಗಿ ರಥೋತ್ಸವ, ತೆಪ್ಪೋತ್ಸವ, ಕೊಂಡೋತ್ಸವ, ಮಹದೇಶ್ವರರ ಮುತ್ತಿನ ಪಲ್ಲಕ್ಕಿ ಉತ್ಸವ, ಲಕ್ಷ ದೀಪೋತ್ಸವ ಇತ್ಯಾದಿ ನಡೆದರೆ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಕೃಷಿ, ವಿಜ್ಞಾನ, ಕೈಗಾರಿಕೆ, ಶಿಕ್ಷಣ, ಆರೋಗ್ಯದ ಬಗ್ಗೆ ತಿಳಿವಳಿಕೆ, ಕ್ರೀಡಾಕೂಟ, ಭಜನಾಮೇಳ, ಕುಸ್ತಿ ಪಂದ್ಯಾವಳಿಗಳು, ದನಗಳ ಪರಿಷೆ, ಸಾಮೂಹಿಕ ವಿವಾಹ, ಸಾಂಸ್ಕೃತಿಕ ಮೇಳಗಳಿಗೂ ಒತ್ತುಕೊಡಲಾಗುತ್ತಿದೆ.

ಪೀಠದ ೨೪ನೇ ಜಗದ್ಗುರುಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆಯುವ ಈ ವೈಭವೋಪೇತ ಜಾತ್ರೆಗೆ ಲಕ್ಷಾಂತರ ಜನರು ಬಂದು ಹೋಗುತ್ತಾರೆ. ಸುತ್ತೂರು ಗ್ರಾಮದ ಹಾದಿಬೀದಿಗಳು ತಳಿರು ತೋರಣಗಳಿಂದ ಅಲಂಕೃತಗೊಂಡು ಅಲ್ಲಿಗೆ ಬರುವ ಭಕ್ತಾದಿಗಳನ್ನು ಸ್ವಾಗತಿಸುತ್ತವೆ. ಕರ್ತೃಗದ್ದುಗೆಗೆ ಮಾಡಲಾಗುವ ದೀಪಾಲಂಕಾರ ಬಹುವಾಗಿ ಆಕರ್ಷಿಸುತ್ತದೆ. ಸುತ್ತಲಿನ ಕಟ್ಟಡಗಳಿಗೂ ವಿದ್ಯುತ್ ದೀಪಾಲಂಕಾರ ಮಾಡುವುದರಿಂದ ಭಕ್ತಾದಿಗಳು ಸಂಜೆಯ ಸಮಯದಲ್ಲಿ ಸಂತೋಷ ಸಂಭ್ರಮದಿಂದ ಅತ್ತಿಂದಿತ್ತ ಸುತ್ತತ್ತ ನೋಡಿ ಆನಂದ ಪಡುವರು. ಗ್ರಾಮೀಣ ಪ್ರದೇಶದ ರೈತ ಸಮುದಾಯದ ಜನರಲ್ಲಿ ಒಂದು ರೀತಿಯ ಪುಳಕಿತ ಭಾವವುಂಟಾಗುತ್ತದೆ.

ಜಾತ್ರೆಯ ಮೊದಲ ದಿನ ಆದಿ ಜಗದ್ಗುರುಗಳ ಪಂಚಲೋಹದ ಉತ್ಸವಮೂರ್ತಿಯನ್ನು ಸುತ್ತೂರು ಗ್ರಾಮದಲ್ಲಿರುವ ಶ್ರೀಮಠದಿಂದ ೨ ಕಿ.ಮೀ. ದೂರದ ಕರ್ತೃಗದ್ದುಗೆಗೆ ಸಾಂಪ್ರದಾಯಿಕವಾಗಿ ಶ್ರೀಮಠದ ಬಿರುದು ಬಾವಲಿಗಳು, ಛತ್ರಿ ಚಾಮರಗಳು, ವಿವಿಧ ಕಲಾ ತಂಡಗಳು ಹಾಗೂ ಮಂಗಳ ವಾದ್ಯಗಳೊಂದಿಗೆ ಭಕ್ತಿಪೂರ್ವಕವಾಗಿ ಉತ್ಸವದಲ್ಲಿ ಕೊಂಡೊಯ್ಯಲಾಗುವುದು. ಎರಡನೇ ದಿನ ಹಾಲ್ಹರವಿ ಉತ್ಸವ ನಡೆಯುತ್ತದೆ. ಮೂರನೇ ದಿನ ನಡೆಯುವ ಆದಿಜಗದ್ಗುರುಗಳ ರಥೋತ್ಸವದಲ್ಲಿ ಸಹಸ್ರಾರು ಜನ ಭಕ್ತರು ಧನ್ಯತಾ ಭಾವದೊಂದಿಗೆ ಭಾಗವಹಿಸುತ್ತಾರೆ. ಪೀಠದ ಜಗದ್ಗುರುಗಳು ರಥದ ಹಗ್ಗವನ್ನು ಎಳೆಯುವ ಮೂಲಕ ಈ ಉತ್ಸವ ಪ್ರಾರಂಭವಾಗುತ್ತದೆ. ಉತ್ಸವದಲ್ಲಿ ನಂದಿಧ್ವಜ, ಛತ್ರಿಚಾಮರ, ಸೂರಿಪಾನಿ, ಗಾರುಡಿ ಗೊಂಬೆ, ಮರಗಾಲು ನೃತ್ಯ, ವೀರಗಾಸೆ, ಡೊಳ್ಳು ಕುಣಿತ, ಪೂಜಾ ಕುಣಿತ, ಕರಡಿ ಮೇಳ, ನಾದಸ್ವರ, ಕೇರಳ, ತಮಿಳುನಾಡಿನ ಸುಪ್ರಸಿದ್ಧ ಜನಪದ ಕಲಾತಂಡಗಳು ಅಲ್ಲದೆ, ಹತ್ತಾರು ಸ್ತಬ್ಧಚಿತ್ರಗಳು ಭಾಗವಹಿಸುತ್ತವೆ. ಇವುಗಳಿಂದಾಗಿ ಉತ್ಸವಕ್ಕೆ ಹೆಚ್ಚಿನ ಮೆರಗು ಬರುತ್ತದೆ. ಈ ವರ್ಷ ನೂತನವಾಗಿ ನಿರ್ಮಿಸಿದ ಬೃಹತ್ ರಥವನ್ನು ಸಮರ್ಪಿಸಲಾಗುತ್ತಿದೆ.

ನಾಲ್ಕನೇ ದಿನ ಶಿವರಾತ್ರೀಶ್ವರರ ಮಠದಲ್ಲಿ ಆಶ್ರಯ ಪಡೆದು ಅಂದಿನ ಶ್ರೀಗಳಿಂದ ಉಪದೇಶ ಪಡೆದು ರಾಗಿಯನ್ನು ಬೀಸುವ ಮುಖಾಂತರ ಕಾಯಕದ ಹಿರಿಮೆಯನ್ನು ಮೆರೆದು ನಂತರ ಏಳುಮಲೆಯನ್ನು ಪ್ರವೇಶಿಸಿದರೆನ್ನಲಾದ ಶ್ರೀ ಮಹದೇಶ್ವರರ ಗೌರವಾರ್ಥ ಮುತ್ತಿನ ಪಲ್ಲಕ್ಕಿ ಉತ್ಸವ, ಜೊತೆಗೆ ೨೨ನೇ ಜಗದ್ಗುರುಗಳಾದ ಮಂತ್ರ ಮಹರ್ಷಿ ಪಟ್ಟದ ಶ್ರೀ ಶಿವರಾತ್ರೀಶ್ವರರು ಹಾಗೂ ೨೩ನೇ ಜಗದ್ಗುರುಗಳಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಭಾವಚಿತ್ರಗಳ ಅಡ್ಡಪಲ್ಲಕ್ಕಿ ಉತ್ಸವವು ಜರುಗುವುದು. ಅಂದು ರಾತ್ರಿ ಶ್ರೀಮಠದಿಂದ ಹೊರಟ ಉತ್ಸವಗಳು ಊರಿನ ಬೀದಿಗಳಲ್ಲಿ ಭಕ್ತಾದಿಗಳ ಪೂಜಾ ಕೈಂಕರ್ಯದೊಂದಿಗೆ ಮಧ್ಯರಾತ್ರಿ ಗದ್ದುಗೆಗೆ ಸೇರುತ್ತದೆ. ಇದರಲ್ಲಿ ಮಹದೇಶ್ವರರ ಹಾಗೂ ಶಿವಶರಣರ ಸ್ತಬ್ಧಚಿತ್ರಗಳನ್ನು ವ್ಯವಸ್ಥೆಗೊಳಿಸಲಾಗುತ್ತದೆ.

ಐದನೇ ದಿನ ಗದ್ದುಗೆಯ ಮುಂಭಾಗದಲ್ಲಿ ಹರಿಯುವ ಕಪಿಲಾನದಿಯಲ್ಲಿ ನಡೆಯುವ ತೆಪ್ಪೋತ್ಸವದಲ್ಲಿ ಸಹಸ್ರಾರು ಜನರು ಭಾಗವಹಿಸುತ್ತಾರೆ. ನದಿಯ ಎರಡೂ ದಂಡೆಗಳಲ್ಲಿ ಸುತ್ತೂರು ಹಾಗೂ ಆಸುಪಾಸಿನ ಗ್ರಾಮಗಳಿಂದ ಬಂದು ಸೇರುವ ಅಪಾರ ಜನಸ್ತೋಮದ ಹರ್ಷೋದ್ಗಾರಗಳ ನಡುವೆ ನದಿಯಲ್ಲಿ ನಿಧಾನವಾಗಿ ತೇಲುವ ಆದಿ ಗುರುಗಳ ತೆಪ್ಪೋತ್ಸವವು ವಿದ್ಯುತ್ ದೀಪಗಳಿಂದ ಅಲಂಕೃತಗೊಂಡು ನೋಡುಗರನ್ನು ಬೇರೊಂದು ಸುಂದರ ಲೋಕಕ್ಕೆ ಕರೆದೊಯ್ದಂತೆ ಭಾಸವಾಗುತ್ತದೆ. ಕಣ್ಣು ಕೋರೈಸುವ ಬಾಣ ಬಿರುಸುಗಳ ಆರ್ಭಟವು ಕೊರೆವ ಚಳಿಯಲ್ಲಿಯೂ ಅಲ್ಲಿದ್ದ ಭಕ್ತ ಸಮೂಹವನ್ನು ೨ ಗಂಟೆಗಳಿಗೂ ಹೆಚ್ಚು ಕಾಲ ಪರವಶಗೊಳಿಸುತ್ತದೆ.

೧೬ ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಉಚಿತ ಸರಳ ಸಾಮೂಹಿಕ ವಿವಾಹವು ಈ ಸಾರಿ ಜ. ೧೮ರಂದು ನಡೆಯುತ್ತಿದೆ. ಎಲ್ಲಾ ಧರ್ಮ, ಜಾತಿಯವರೂ ಇದರಲ್ಲಿ ಭಾಗವಹಿಸಿ ವಿವಾಹವಾಗಿದ್ದಾರೆ. ಈಗಾಗಲೇ ೨,೬೦೦ಕ್ಕೂ ಹೆಚ್ಚು ಮಂದಿ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಇಲ್ಲಿ ಮದುವೆಯಾಗುವ ವಧು-ವರರಿಗೆ ಮಾಂಗಲ್ಯ, ಸೀರೆ, ಕಾಲುಂಗುರ, ಹಾಗೂ ಪಂಚೆ, ಶರ್ಟ್, ವಲ್ಲಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಇದರಲ್ಲಿ ತಮಿಳುನಾಡಿನಿಂದ ಬಂದವರೂ ಇದ್ದಾರೆ. ಅಂದೇ ಇವರಿಗೆಲ್ಲ ರಿಜಿಸ್ಟರ್ ಆಫೀಸಿನಲ್ಲಿ ಮದುವೆ ಆದ ಬಗ್ಗೆ ರಿಜಿಸ್ಟರ್ ಮಾಡಿಸಿಯೂ ಕಳಿಸಲಾಗುತ್ತಿರುವುದು ವಿಶೇಷವಾಗಿದೆ. ಈ ವರ್ಷ ಆರನೇ ದಿನ ಅನ್ನ ಬ್ರಹ್ಮೋತ್ಸವ ನಡೆಯಲಿದೆ. ಭಜನಾ ಮೇಳದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚೆಚ್ಚು ತಂಡಗಳು ಭಾಗವಹಿಸುತ್ತಾ ೨೬ನೇ ವರ್ಷಕ್ಕೆ ಕಾಲಿಡುತ್ತಿವೆ. ಕಳೆದ ವರ್ಷ ರಾಜ್ಯದ ಬೇರೆ ಬೇರೆ ಜಿಲ್ಲೆಗಳ ಸುಮಾರು ೬೦೦ ತಂಡಗಳು ಭಾಗವಹಿಸಿದ್ದವು. ಈ ಸಾರಿ ಇನ್ನು ಹೆಚ್ಚಿನ ತಂಡಗಳು ಭಾಗವಹಿಸಿ ೮೦೦ರ ಗಡಿ ದಾಟುವ ಸಾಧ್ಯತೆ ಇದೆ. ಉತ್ತರ ಕರ್ನಾಟಕದಿಂದಲೇ ಹೆಚ್ಚಿನ ತಂಡಗಳು ಬಂದು ಭಾಗವಹಿಸುತ್ತಿವೆ. ಜಾತ್ರೆಯ ಆರೂ ದಿನ ಬೆಳಗ್ಗೆಯಿಂದ ಸಂಜೆಯವರೆವಿಗೂ ನಡೆಯುವ ಭಜನಾ ಮೇಳದಲ್ಲಿ ಪುರುಷರು, ಮಹಿಳೆಯರು ಹಾಗೂ ಮಕ್ಕಳ ತಂಡಗಳು ಮತ್ತು ಏಕನಾದ ತಂಡಗಳಲ್ಲಿ ಸ್ಪರ್ಧೆ ನಡೆಯುತ್ತದೆ. ಪ್ರತೀ ವಿಭಾಗಕ್ಕೂ ಐದು ಬಹುಮಾನಗಳನ್ನು ನೀಡಿ ಭಜನೆಯ ಪ್ರವೃತ್ತಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

ಜಾತ್ರೆಯ ಪ್ರಮುಖ ಆಕರ್ಷಣೆ ಎಂದರೆ ಕೃಷಿ ಮೇಳ. ಗ್ರಾಮೀಣ ಪ್ರದೇಶದ ರೈತಾಪಿ ಜನರಿಗೆ ತಂತ್ರಜ್ಞಾನದ ಬಗ್ಗೆ ಮಾಹಿತಿ, ಜೊತೆಗೆ ಸಮಗ್ರ ಬೆಳೆ ನಿರ್ವಹಣೆ, ಕೃಷಿ ಕ್ಷೇತ್ರದಲ್ಲಿನ ಪ್ರಮುಖ ತಂತ್ರಜ್ಞಾನಗಳನ್ನು ರೈತರಿಗೆ ಪರಿಚಯಿಸಲು ಕೃಷಿ ಮೇಳ ಆಯೋಜಿಸಲಾಗುತ್ತಿದೆ. ಈ ವರ್ಷ ವಿಶೇಷವಾಗಿ ದೇಸಿ ತಳಿಗಳ ವೈವಿಧ್ಯತೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ರಾಷ್ಟ್ರಪ್ರಶಸ್ತಿ ವಿಜೇತ ತಳಿಸಂರಕ್ಷಕ ರೈತರ ಸಂಗ್ರಹದಿಂದ ಆಯ್ದ ಬೆಳೆ ಹಾಗೂ ತಳಿಗಳನ್ನು ಪ್ರದರ್ಶಿಸಲಾಗುತ್ತಿದೆ. ಒಣಬೇಸಾಯದಲ್ಲಿ ಬೆಳೆಯುವ ಸಿರಿಧಾನ್ಯಗಳು ದ್ವಿದಳ ಧಾನ್ಯಗಳ ಪ್ರಾತ್ಯಕ್ಷಿಕೆ ಹಾಗೂ ಮಾರಾಟದ ವ್ಯವಸ್ಥೆ ಮಾಡಿರುವುದು ರೈತರಿಗೆ ಬಹು ಉಪಯೋಗವಾಗುವುದರಲ್ಲಿ ಅನುಮಾನವಿಲ್ಲ.

ಬಿತ್ತನೆ ಬೀಜಗಳನ್ನು ದೀರ್ಘಕಾಲದವರೆಗೆ ಸುರಕ್ಷಿತವಾಗಿ ಶೇಖರಿಸಿಡುವ ಸಲುವಾಗಿ 'ಸೀಡ್ ಹಬ್' ಯೋಜನೆಯ ಅನುದಾನದಿಂದ ಹೊಸ ಉಗ್ರಾಣವನ್ನು ನಿರ್ಮಿಸಲಾಗುತ್ತಿದೆ. ಈ ಉಗ್ರಾಣದಲ್ಲಿ ಒಂದೇ ಬಾರಿಗೆ ೧೦೦ ಕ್ವಿಂಟಾಲಿನಷ್ಟು ಬಿತ್ತನೆ ಬೀಜಗಳನ್ನು ಶೇಖರಣೆ ಮಾಡಬಹುದಾದ ವ್ಯವಸ್ಥೆ ಇಲ್ಲಿದೆ.

ವಸ್ತು ಪ್ರದರ್ಶನದಲ್ಲಿ ೩೦೦ ಮಳಿಗೆಗಳಿದ್ದು, ಅದರಲ್ಲಿ ಕೈಗಾರಿಕೆ, ಶಿಕ್ಷಣ, ವಿಜ್ಞಾನ, ಆರೋಗ್ಯ, ತಾಂತ್ರಿಕ ಹಾಗೂ ಸಾಂಸ್ಕೃತಿಕ ವಿಭಾಗಗಳನ್ನೊಳಗೊಂಡ ಮಳಿಗೆಗಳಿರುತ್ತವೆ. ಅಲ್ಲದೆ ಕರಕುಶಲ, ಕೈಮಗ್ಗ, ಗೃಹೋಪಯೋಗಿ ಪ್ರದಾರ್ಥಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಪ್ರೌಢಶಾಲಾ ವಿದ್ಯಾರ್ಥಿಗಳು ತಯಾರಿಸಿದ ವಿವಿಧ ನಮೂನೆಯ ೨೦೦ಕ್ಕೂ ಹೆಚ್ಚು ಉತ್ತಮ ಶೈಕ್ಷಣಿಕ ಮಾದರಿ ಮಳಿಗೆಗಳೂ, ಸರ್ಕಾರಿ, ಅರೆ ಸರ್ಕಾರಿ, ಸ್ವಯಂ ಸೇವಾ ಸಂಸ್ಥೆಗಳೂ ಸಹ ಪ್ರದರ್ಶನದಲ್ಲಿ ಭಾಗವಹಿಸುತ್ತಿವೆ.

ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ಕುಸ್ತಿ ಪಂದ್ಯಾವಳಿಗಳು, ದೇಸಿ ಆಟಗಳನ್ನು ಏರ್ಪಡಿಸಲಾಗುತ್ತಿದೆ. ಜೆಎಸ್‌ಎಸ್ ಅಂತರ ಸಂಸ್ಥೆಗಳ ಸಾಂಸ್ಕೃತಿಕ ಮೇಳದಲ್ಲಿ ಸುಮಾರು ೩,೫೦೦ ರಷ್ಟು ವಿದ್ಯಾರ್ಥಿಗಳು ೪೫೦ಕ್ಕೂ ಹೆಚ್ಚು ಕಾರ್ಯಕ್ರಮ ನಡೆಸಿಕೊಡುವರು. ದೋಣಿ ವಿಹಾರವಾಗಿರಬಹುದು, ಗಾಳಿಪಟ ಹಾರಾಟ ಸ್ಪರ್ಧೆಯಾಗಿರಬಹುದು, ಸೋಬಾನೆ ಪದ ಸ್ಪರ್ಧೆಯಾಗಿರಬಹುದು, ರಂಗೋಲಿ ಸ್ಪರ್ಧೆಯಾಗಿರಬಹುದು. ವಿದ್ಯಾರ್ಥಿಗಳು, ಗ್ರಾಮೀಣ ಪ್ರದೇಶದ ಪುರುಷರು, ಮಹಿಳೆಯರು ಭಾಗವಹಿಸುವಂತಹ ಅನೇಕ ಸ್ಪರ್ಧೆಗಳನ್ನು ಏರ್ಪಡಿಸಿರುವುದು ಜಾತ್ರೆಗೆ ಎಲ್ಲರ ಸಹಭಾಗಿತ್ವ ಇದೆ ಎಂಬುದನ್ನು ತೋರಿಸುತ್ತದೆ.

ದಾಸೋಹವಂತೂ ವರ್ಣನಾತೀತ. ಜಾತ್ರೆಗೆ ಬರುವ ಎಲ್ಲರಿಗೂ ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಹಾಗೂ ರಾತ್ರಿಯ ಊಟದ ವ್ಯವಸ್ಥೆ ಉತ್ತಮವಾಗಿರುತ್ತದೆ. ಪ್ರತಿನಿತ್ಯ ಕನಿಷ್ಠ ೫೦ಸಾವಿರದಿಂದ ೧ ಲಕ್ಷದವರೆಗೆ ಜನರು ಪ್ರಸಾದ ಸ್ವೀಕರಿಸುವರು. ಜಾತ್ರೆಗೆ ಬರುವ ಭಕ್ತರಿಗೆ ಊಟದ ನಂತರ ರಾತ್ರಿ ಮನರಂಜನೆಯ ಸಲುವಾಗಿ ೬ ದಿನಗಳ ಕಾಲ ಬೇರೆ ಬೇರೆ ಕಡೆಯ ನಾಲ್ಕು ವೇದಿಕೆಗಳಲ್ಲಿ ಗ್ರಾಮಾಂತರ ಹಾಗೂ ನಗರ ಪ್ರದೇಶದ ವೃತ್ತಿಪರ ಕಲಾವಿದರಿಂದ ಹಾಗೂ ಹವ್ಯಾಸಿ ಕಲಾವಿದರಿಂದಲೂ ೧೫ ನಾಟಕಗಳ ವ್ಯವಸ್ಥೆ ಮಾಡಲಾಗಿದೆ.

ಜಾತ್ರೆಗೆ ಬರುವ ಜನರಿಗೆ ಶಾಶ್ವತ ವಸತಿಗಳ ಜೊತೆಗೆ ಸಾವಿರಾರು ಮಂದಿಗೆ ತಾತ್ಕಾಲಿಕ ವಸತಿ ವ್ಯವಸ್ಥೆಯನ್ನೂ ಮಾಡಲಾಗುತ್ತಿದೆ. ಈ ೬ ದಿನಗಳ ಜಾತ್ರಾ ಮಹೋತ್ಸವದಲ್ಲಿ ನಾಡಿನ ಅನೇಕ ಮಠಾಧೀಶರು, ಮಂತ್ರಿ ಮಹೋದಯರು, ಸಂಸದರು, ಶಾಸಕರು ಹಾಗೂ ಕಲಾವಿದರು ಭಾಗವಹಿಸುತ್ತಿರುವುದು ವಿಶೇಷ. ಬೇರೆ ಜಾತ್ರೆಗಳಂತಲ್ಲದೆ ಈ ಮಹೋತ್ಸವ ಧಾರ್ಮಿಕತೆ ಜೊತೆಗೆ ಶಿಕ್ಷಣ, ಮನರಂಜನೆ, ಕೃಷಿಗೆ ಒತ್ತು ಕೊಡುತ್ತಿರುವುದು ಶ್ಲಾಘನೀಯ.